


“ಹುಚ್ಚು ನಾಯಿಯೇ, ಏನೋ...?”

ಆಗ ಅಮ್ಮನ ಜಾರ್ಜೆಟ್ ಸೀರೆಯ ದಯನೀಯ ಸ್ಥಿತಿ ಕುಟ್ಟನ ತಂಗಿಯ ಕಣ್ಣಿಗೆ ಬಿತ್ತು.

“ನೋಡಮ್ಮ, ನಿನ್ನ ಸೀರೆ...”

ಕುಟ್ಟನಿಗೆ ನಾಯಿ ಕಡಿದುದಕ್ಕಿಂತಲೂ ಪ್ರಮುಖವಾದ ವಿಷಯವಾಗಿ ಆ ಚಂದದ ಸೀರೆ ಹರಿದುದು... ಗಾಯ ಒಣಗಬಹುದು. ಆದರೆ, ಸೀರೆ!... ಗೃಹಿಣಿಗೆ ಸಿಟ್ಟು ದುಃಖ ಎರಡೂ ಒಟ್ಟಿಗೆ ಬಂತು. ಒಂದೇ ಒಂದು ದಿನ ಮಾತ್ರವೇ ಆ ಸೀರೆಯನ್ನು ಅವರು ಉಟ್ಟಿದ್ದರು. ರಕ್ತವರ್ಣವಿರುವ ಆ ಸೀರೆಗೆ ಜಾಕೆಟ್‌ನೊಡನೆ ಎಂತಹಾ ಹೊಂದಿಕೆಯಾಗುತ್ತಿತ್ತು!...

“ಆ ನಾಯಿಗೆ ಹುಚ್ಚು... ಅಲ್ಲವಾದರೆ ಇದನ್ನೆಲ್ಲ ಕಚ್ಚಿ ಹರಿಯುವುದು...”

ಅಡುಗೆಯವನ ಅಭಿಪ್ರಾಯ.

ಮನೆಯ ಯಜಮಾನರನ್ನು ಇದು ಹೆಚ್ಚು ಕಷ್ಟಕ್ಕೀಡು ಮಾಡಿತು. ಹುಚ್ಚು ನಾಯಿಯ ವಿಷದ ತೀಕ್ಷ್ಣತೆ ತಂದೆಯಲ್ಲಿ ನಡುಕವುಂಟಾಯಿತು!...

“ಎಲೇ ನಾಣು, ನಾಯಿ ಏನನ್ನಾದರೂ ತಿಂದಿದೆಯಾ? ಹುಚ್ಚು ನಾಯಿ ತಿನ್ನಲಾರದು...”

ನಾಣು ನೆನಪಿಸಿಕೊಂಡ.

“ನಿನ್ನೆ, ಇವತ್ತು ಏನನ್ನೂ ತಿನ್ನಲಿಲ್ಲ...”

ಯಜಮಾನರು ಎದೆ ಸವರಿಕೊಂಡರು.

“ಇನ್ನು ಆ ನಾಯಿ ಜಿಮ್ಮಿಯನ್ನು ಕಡಿದರೆ ಮತ್ತೆ ಅನರ್ಥವಾದೀತು... ನಾಣು ಅದೆಲ್ಲಿದೆಯೆಂದು ನೋಡು. ನಾನು ಕೋಲು ತೆಗೆದುಕೊಂಡು ಬರುತ್ತೇನೆ... ಬರುತ್ತೇನೆ...”

ನಾಣು ಅನ್ವೇಷಣೆಗೆ ಮುಂದಾದ. ರೋಸಿ ಅಲ್ಲೆಲ್ಲಿಯೂ ಕಾಣಿಸಲಿಲ್ಲ.

★★★

ರೋಸಿ ಅಷ್ಟು ದಡ್ಡಳಾಗಿರಲಿಲ್ಲ. ಅವಳಿಗರಿವಿದೆ, ಕ್ರೂರವಾದ ಈ ಮನುಷ್ಯನ ಕೈಗೆ ಸಿಕ್ಕಿದರೆ ಅವಸ್ಥೆ ಏನಾದೀತೆಂದು. ಅವಳು ಗೋಡೆ ಹಾರಿ ಹೊರಗೆ ಹೋದಳು.

ಒಂದೆರಡು ಮನೆಗಳನ್ನು ದಾಟಿ ಅಗಲವಾದ ಓಣಿಯ ಮೂಲಕ ಸಾಗಿ ಅವಳು ತಲುಪಿದ್ದು